ಯುದ್ಧೋನ್ಮಾದದಲ್ಲಿ ಸಿಕ್ಕಸಿಕ್ಕಲ್ಲಿ ದಂಡೆತ್ತಿಹೋಗಿ ಬೊಕ್ಕಸ ಬರಿದಾಗಿದ್ದೂ ಅಲ್ಲದೇ ನಾಡಿನ ಅರ್ಧಕ್ಕರ್ಧ ಗಂಡುಗಲಿಗಳನ್ನೂ ಕಳೆದುಕೊಂಡ ರಾಜ್ಯವನ್ನು ಸಂಭಾಳಿಸುವುದು ಸುಲಭವಾಗಿರಲಿಲ್ಲ. ಜನರ ನಿರೀಕ್ಷೆಯೂ ಅಪಾರವಾಗಿತ್ತು. ಆದರೆ ಅರೆಹೊಟ್ಟೆಯಲ್ಲಿದ್ದೂ ಮನಸು ತುಂಬಿಸುವ ಯಾವುದಕ್ಕೋ ಹಂಬಲಿಸುವ ಜನರ ಗುಣವನ್ನು ಇಷ್ಟರಲ್ಲೆ ಚೆನ್ನಾಗಿ ಅರಿತಿದ್ದನು. ಜನರನ್ನು ಹೀಗೇ ಭಾವಸಂಬಂಧಿ ಸಂದೇಶಗಳ ವಿನಿಮಯದಲ್ಲಿರಿಸುವ ಚಾಣಾಕ್ಷತಂತ್ರವನ್ನೂ ರಾಜನೊಡನೆ ಸಮಾಲೋಚಿಸಿದನು. ತನ್ನ ವಿಚಾರ ಮಂಡನೆಯಲ್ಲಿ ಮಹಾರಾಜನ ಮನಸ್ಸು ಎಲ್ಲೋ ಇರುವುದನ್ನು ಗ್ರಹಿಸಿ, ''ಕಾವ್ಯಾಪರಾಧಿಗಳನ್ನು ಶೀಘ್ರವೇ ಪತ್ತೆ ಹಚ್ಚಲಾಗುವುದು ಮಹಾಪ್ರಭು'' ಎಂದನು! ಮಹಾರಾಜನು, ''ಒಳಗೇ ಇರುವ ಅಪರಾಧಿಗಳನ್ನು ಹೊರಗೆ ಹುಡುಕುವ ಹುಚ್ಚುತನ ಬಿಡು ಮಂತ್ರಿ'' ಎಂದು ನಕ್ಕನು. ಒಮ್ಮೆಲೇ ಗಂಭೀರನಾಗಿ, ''ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗಲೇ ಬೇಕು. ನಾಳೆ ರಾಜಸಭೆ ಜರುಗಲಿ" ಎಂದು ಆದೇಶವಿತ್ತನು.

'ಮಾಲವಿಕೆಯ ತಲೆದಂಡದಿಂದಲೂ ಸತ್ಯವನ್ನು ಮುಚ್ಚಿಹಾಕುವುದು ಸಾಧ್ಯವಾಗಲಿಲ್ಲವಲ್ಲ' ಎಂಬ ಆಘಾತದಲ್ಲಿ ಮಂತ್ರಿ ಬೆವರಿದನು.

★★★

ರಾಜನ ಆಸ್ಥಾನವು ಮಂತ್ರಿಮಹೋದಯರು, ಜ್ಯೇಷ್ಠ ಸಲಹೆಗಾರರಿಂದ ತುಂಬಿತ್ತು. ಆದರೂ ಎಲ್ಲೂ ಒಂದು ಸೊಲ್ಲೂ ಕೇಳುತ್ತಿರಲಿಲ್ಲ. ವಾತಾವರಣ ಬಿಗುವಿನಿಂದ ಕೂಡಿತ್ತು. ಮಹಾಮಂತ್ರಿಯ ಮುಖದಲ್ಲಿ ದುಗುಡವೂ ಪರಿಸ್ಥಿತಿಯ ತೀವ್ರತೆಯೂ ಎದ್ದು ಕಾಣುತ್ತಿತ್ತು. ನೆರೆದವರಿಗೆ ಒಳಸಂಚು, ಪಿತೂರಿ, ರಾಜದ್ರೋಹ, ಅಪರಾಧ ಯಾವುದೆಂದು ಸ್ಪಷ್ಟವಿರದಿದ್ದರೂ ಗಾಳಿಯಲ್ಲಿ ಬರೀ ಅದರ ವಾಸನೆಯೇ ತುಂಬಿತ್ತು. ಕಿರಿಯ ರಾಣಿಗೂ ಸೇನಾಪತಿಗೂ ಮಧುರಮತಿಗೂ ಇದು ತಮ್ಮ ಕೊನೆಯದಿನ ಎಂಬ ಅರಿವಾಗಿತ್ತು. ಮಧುರಮತಿಯು ಆಸ್ಥಾನಕ್ಕೆ ಬರುತ್ತಿದ್ದಂತೆ ಕಿರಿಯ ರಾಣಿಗೆ ಅವನ ಚರಣಸ್ಪರ್ಶ ಮಾಡುವ ಮನಸ್ಸಾದರೂ ತಡೆದು ನಿಂತಳು. ತನ್ನ ಹೃದಯ ಸಿಂಹಾಸನದ ದೊರೆಯಾಗಿರುವ ಸೇನಾಪತಿ ಮತ್ತು ತನ್ನ ಹೃದಯದ ಭಾವನೆಗಳಿಗೆ ಮೂರ್ತರೂಪ ನೀಡಿದ ಮಧುರಮತಿ ಇಬ್ಬರ ನಡುವೆ ನಿಂತಿರುವ ಆ ಗಳಿಗೆ ತನ್ನ ಬದುಕಿನ ಸಾರ್ಥಕ ಕ್ಷಣವೆನಿಸಿತು. ಸಕಲ ಅಪರಾಧಗಳಿಗೂ ತನ್ನನ್ನೇ ಬಾಧ್ಯಸ್ಥಳನ್ನಾಗಿ ಮಾಡಿಕೊಳ್ಳುವ ಮೂಲಕ ಎರಡು ಜೀವಗಳನ್ನು ಉಳಿಸಬಹುದಲ್ಲವೇ? ಎಂದು ತನ್ನನ್ನೆ ಕೇಳಿಕೊಂಡಳು. ಇಂಥ ಆತ್ಮಸಮರ್ಪಣೆಯಿಂದಾದರೂ ತನ್ನಂಥ ಅತೃಪ್ತ ಮನಸುಗಳಿಗೆ ಸಮಾಧಾನ ಸಿಗಬಹುದು ಎನಿಸಿದಾಗ ಅವಳಲ್ಲಿ ಅನೂಹ್ಯ ಶಾಂತಿ ನೆಲೆಗೊಂಡಿತು. ಇತ್ತ ತನ್ನ ಬಾಲ್ಯಸ್ನೇಹಿತೆಗೆ ಪ್ರೀತಿ ಕೊಡುವುದಿರಲಿ ಅವಳ ಜೀವಕ್ಕೂ ಕುತ್ತಾದೆ ಎಂಬ ಪಶ್ಚಾತ್ತಾಪದಲ್ಲಿ ಬೇಯುತ್ತಿದ್ದ ಸೇನಾಪತಿಗೆ ಎಲ್ಲ ಅಪರಾಧಗಳಿಗೂ ತನ್ನನ್ನೇ ಹೊಣೆಯಾಗಿಸಿಕೊಂಡು ಕಿರಿಯ ರಾಣಿಯನ್ನು ಬಚಾವು ಮಾಡಬೇಕೆನ್ನುವ ಯೋಚನೆ ಬಂದದ್ದೇ ಗೆಲುವಾದನು. ಕುಂಬಾರನ ವೇಷದಲ್ಲಿದ್ದ ಮಧುರಮತಿಗೆ ತಾನು ಈ ವರೆಗೂ ಧರಿಸಿದ್ದ ಮುಖವಾಡವನ್ನು ಕಿತ್ತು ನಿಜಸ್ವರೂಪದಲ್ಲಿ ನಿಲ್ಲಬೇಕಾದ ಗಳಿಗೆ ಇದು ಅನಿಸಿತು. ಅಂತರಂಗದಲ್ಲೂ ಬಹಿರಂಗದಲ್ಲೂ ತಾನು ತಾನಾಗಿಯೇ ಬಯಲಾಗಬೇಕು ಅನಿಸಿತು. ಮರಣದಂಡನೆಯಾಗುವುದಿದ್ದರೆ ಮಧುರಮತಿಗೇ ಆಗಬೇಕು ವಿನಃ ಪಾಪದ ಕುಂಬಾರನಿಗಲ್ಲ, ತಾನು ಸಂಪೂರ್ಣವಾಗಿ ಬಯಲಾಗುತ್ತೇನೆ ಎಂದು ನಿಶ್ಚಯಿಸಿಕೊಂಡಂತೆಯೇ ಮಧುರಮತಿಯ ಮುಖದಲ್ಲೂ